# ತಾರಿಸೋ ಶ್ರೀಹರಿ ತಾರಿಸೋ

1. **Ref.:** Shri Purandara Dasara Sahitya Part – 1, Pooja Tatva, edited by Shri Betageri Krishna Sharma and Shri Bengeri Huchha Rayaru, page No. 103.
2. **Ref.:** Samagra Dasa Sahitya, Samputa 3.1 published by Kannada & Culture Dept, Govt of Karnataka, Bengaluru, page No. 240.
3. **Ref.:** Purandara Sahitya Darshana, Samputa 2, Adhyatma Darshana edited by Prof. S.K. Ramachandra Rao, page No. 285.
4. **Ref.:** Dasara Padagalu – Purandara Dasara Keerthane, Samyukta Samputa, Edited by Shri Pavanje Gururao, Sriman Madhwa Siddantha Granthalaya, Udupi, page No. 265.
5. **Note:** Lyrics given without highlights are as per Ref. 1. The wordings in Ref. 2 and Ref. 3 are same as in Ref. 1. The wordings in Ref. 4 are slightly different and are given separately in green highlights.
6. **Note:** Singer has followed lyrics as in Ref. 4.

ರಾಗ: ಶಂಕರಾಭರಣ ತಾಳ: ಅಟ

ತಾರಿಸೊ ಶ್ರೀಹರಿ ತಾರಿಸೊ ॥ ಪ ॥

ತಾರಿಸೊ ಭವವ ನಿವಾರಿಸೊ ನಿನ್ನಡಿಯ
ತೋರಿಸೊ ವೈಕುಂಠ ಸೇರಿಸೋ ರಂಗಯ್ಯ ॥ ಅಪ ॥

ಪಾಪವಿನಾಶನ ಮಾಡುವಿ ನೀ
ತಾಪಸರನು ನಿತ್ಯ ಸಲಹುವಿ
ವ್ಯಾಪಿಸಿ ಸರ್ವತ್ರ ನಿನ್ನವರನು ಕಾಯ್ವ
ಶ್ರೀ ಪಾಂಡುರಂಗ ಪರಮಾತ್ಮ ಮುಕುಂದ ॥ 1 ॥

ಹಿರಣ್ಯಕಶಿಪುವನು ಸೀಳಿದೆ ಅವನ
ಕರುಳನು ಕೊರಳೊಳು ಹಾಕಿದೆ
ದುರಳ ಬುದ್ಧಿಯ ತಳೆದ ದೈತ್ಯಾಧಮನ ಕೊಂದು

ಕರುಣದಿಂದಲಿ ಕಂದಗೊಲಿದೆ ಗೋವಿಂದ    || 2 ||

ಅಸುರೆ ಪೂತನಿಯ ಸಂಹರಿಸಿದೆ ನೀ
ಶಶಿಮುಖಿಯಭಿಮಾನ ಕಾಯ್ದೆ
ಶಿಶುವಾಗಿ ಬಾಲಲೀಲೆಗಳನು ತೋರಿದೆ
ಕುಸುಮನಾಭ ಶ್ರೀ ಪುರಂದರ ವಿಠಲ    || 3 ||

**Note:** The lyrics given below are as per Ref. 4.

ರಾಗ: ಭೈರವಿ        ತಾಳ: ಆದಿ

ತಾರಿಸೋ ಶ್ರೀಹರಿ ನಮ್ಮ ತಾರಿಸೋ    || ಪ ||

ತಾರಿಸೋ ಭವ ನಿವಾರಿಸೋ, ನಿನ್ನ ಪಾದ
ತೋರಿಸೋ ವೈಕುಂಠವಾಸ ರಂಗಯ್ಯ    || ಅಪ ||

ಪಾಪ ವಿನಾಶವ ಮಾಡುವೆ ನೀ
ತಾಪಸಿಯರನು ಸಲಹುವೆ
ವ್ಯಾಪಿಸಿ ನಿನ್ನ ನೆನೆವರ ಕಾಯ್ವ
ಶ್ರೀಪಾಂಡುರಂಗ ಪರಮಾತ್ಮ ಮುಕುಂದ    || 1 ||

ಹಿರಣ್ಯಕಶಿಪುವಿನ ಸೀಳಿದೆ, ಅವನ
ಕರುಳು ಕೊರಳೊಳು ಹಾಕಿದೆ
ದುರುಳ ರೂಪದ ದೈತ್ಯರ ಕೊಂದು
ಕರುಣದಿಂದಲಿ ಕಂದಗೊಲಿದ ಗೋವಿಂದ    || 2 ||

ಅಸುವ ಪೂತನಿಯ ಹೀರಿದೆ ನೀ
ಶಶಿಮುಖಿಯಭಿಮಾನ ಕಾಯಿದೆ
ಶಿಶುವಾಗಿ ಬಾಲ ಲೀಲೆ ತೋರಿದೆ
ಕುಸುಮನಾಭ ಶ್ರೀ ಪುರಂದರ ವಿಠಲ    || 3 ||

**ಕಠಿಣ ಪದಗಳ ಅರ್ಥ ಮತ್ತು ಟಿಪ್ಪಣಿ:**

**ತಾರಿಸೋ** – ಪಾರುಗಾಣಿಸೋ; ಸಂಸಾರ(ಭವ)ವೆಂಬ ತೊರೆಯನ್ನು ದಾಟಿಸೋ.

**ಕಂದಗೆ** – ಪ್ರಹ್ಲಾದನಿಗೆ.

**ಶಶಿಮುಖಿಯಭಿಮಾನ** – ದ್ರೌಪದಿಯ ಮಾನವನ್ನು.

**Classification:** Keerthane
**Ankita:** sri purandara vittala
**Location:** NA
**Category:** Pooja Tatva, dashavatara,
**Sub-Category:** bhava, vaikunta, ranga, papa, asura, panduranga, karuna, govinda, putani, draupadi, Krishna, paramatma, mukunda,
**Pravachana:** NA
**Explanation:** NA